ದುರುಪಯೋಗ ಮಾಡಿದ್ದಲ್ಲಿ ಜೊತೆಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂತಲೂ ಮತ್ತು ಅಧಿಕಾರೇತರರು ದುರುಪಯೋಗ ಮಾಡಿದ್ದಲ್ಲಿ ಅವರ ಮೇಲೆ ಸಿವಿಲ್ ಕ್ರಿಮಿನಲ್ ಕ್ರಮದ ಜೊತೆಗೆ ಸಹಕಾರ ಸಂಘಗಳ ಕಾಯ್ದೆ ೧೯೫೯ ಕಲಂ ೧೨೬ (ಎ) ಅನ್ವಯ ಕ್ರಮ ತೆಗೆದುಕೊಳ್ಳತಕ್ಕದೆಂದು ಮತ್ತು ಅವರನ್ನು ಜವಾಬ್ದಾರರನ್ನಾಗಿ ಮಾಡುವಂತೆಯೂ ಆದೇಶ ನೀಡಲಾಗಿದೆ.

ಸರೋಜಿನಿ ಮಹಿಷಿಯವರ ವರದಿ

೧೫೧೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರೀಮತಿ ಸರೋಜಿನಿ ಮಹಿಷಿಯವರ ವರದಿ ಯಾವ ಹಂತದಲ್ಲಿದೆ ?

ಆ) ಸದರಿ ವರದಿಯನ್ನು ಶೀಘ್ರವಾಗಿ ಜಾರಿಗೊಳಿಸಲಾಗುವುದೇ ?

ಇ) ಸರ್ಕಾರದವರು ಸದರಿ ವರದಿಯ ಶಿಫಾರಸ್ಸುಗಳನ್ನು ಪರಿಶೀಲಿಸಲು ಇನ್ನೊಂದು ಸಮಿತಿಯನ್ನು ಸಂಸತ್ ಸದಸ್ಯರಾದ ಡಾ. ವಿ. ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ರಚಿಸಿರುವುದು ನಿಜವೇ. ಹಾಗಿದ್ದಲ್ಲಿ, ಅದರ ಕಾರ್ಯ ಎಲ್ಲಿಯವರೆಗೆ ಬಂದಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ), ಆ) ಮತ್ತು ಇ) ಡಾ. ಸರೋಜಿನಿ ಮಹಿಷಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಶೀಘ್ರವಾಗಿ ಜಾರಿಗೊಳಿಸುವ ಕ್ರಮದ ಮೇಲ್ವಿಚಾರಣೆ ಗೋಸ್ಕರ ಮತ್ತು ಆ ಶಿಫಾರಸುಗಳಿಂದ ಉದ್ಭವಿಸಬಹುದಾದ ಇತರ ಅಂಶಗಳನ್ನು ಪರಿಶೀಲಿಸುವುದ ಕ್ಕೋಸ್ಕರ ಸರ್ಕಾರವು ಡಾ. ವಿ. ವೆಂಕಟೇಶ್, ಸಂಸತ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಈ ಸಮಿತಿಯು ದಿನಾಂಕ ೧೯-೫-೮೮ರಂದು ಅಸ್ತಿತ್ವಕ್ಕೆ ಬಂದಿದೆ ಹಾಗೂ ಇತ್ತೀಚೆಗೆ ಈ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ಮಧ್ಯಕಾಲಿಕ ವರದಿಯಲ್ಲಿನ ಶಿಫಾರಸ್ಸುಗಳು ಸರಕಾರದ ಪರಿಶೀಲನೆಯಲ್ಲಿವೆ.

ಕಂಕನಾಡಿ ತಲಪಾಡಿ ಹೆದ್ದಾರಿ ಅಪಘಾತಗಳು

೩೦೫೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರಿನ ಕಂಕನಾಡಿಯಿಂದ ಕೇರಳದ ಗಡಿ ತಲಪಾಡಿವರೆಗಿನ ೧೬ ಕಿ. ಮೀ. ಹೆದ್ದಾರಿಯಲ್ಲಿ ೧೯೮೫-೮೬, ೧೯೮೬-೮೭, ೧೯೮೭-೮೮ರಲ್ಲಿ ಸಂಭವಿಸಿದ ವಾಹನ ಅಪಘಾತಗಳೆಷ್ಟು?

ಆ) ಇದರಿಂದ ಆಗಿರುವ ಜೀವ ಹಾನಿಗಳೆಷ್ಟು ? ತೀವ್ರತರ ಅಪಘಾತಕ್ಕೆ ಬಲಿಯಾಗಿ ಚಿಕಿತ್ಸೆ ಪಡೆದವರೆಷ್ಟು ?

ಇ) ಈ ಕಿರಿದಾದ ಪ್ರಮಾಣದ ಪ್ರಯಾಣದಲ್ಲಿ ಸಂಭವಿಸುವ ವಾಹನ ಅಪಘಾತಗಳನ್ನು ತಪ್ಪಿಸಲು ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿರುವರೇ ?

ಈ) ವಾಹನಗಳ ಚಾಲಕರಿಗೆ ಸೂಕ್ತ ನೇಮ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಪಹರೆ ಹಾಕಲಾಗುವುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ)

೧೯೮೫	...	೩೩
೧೯೮೬	...	೩೪
೧೯೮೭	...	೩೨
೧೯೮೮	...	೨೫
(ಆಗಸ್ಟ್ ೩೧ರ ವರೆಗೆ)		——
	ಒಟ್ಟು	೧೨೪

ಆ)

		ಸತ್ತವರು	ತೀವ್ರತರ ಗಾಯಗೊಂಡು ಚಿಕಿತ್ಸೆ ಪಡೆದವರು
೧೯೮೫	...	೮	೬
೧೯೮೬	...	೧೧	೧೨
೧೯೮೭	...	೬	೭
೧೯೮೮	...	೪	೬
	ಒಟ್ಟು	೨೯	೩೧

೫) ೧) ತಗ್ಗು ಪ್ರದೇಶ ಮತ್ತು ಸಣ್ಣ ಸಣ್ಣ ಗುಂಡಿಗಳನ್ನು ಭರ್ತಿ ಮಾಡಿ ರಸ್ತೆಯನ್ನು ಸಮವಾಗಿ ಸಂಚಾರಕ್ಕೆ ಸಮರ್ಪಕವಾಗಿ ಇಟ್ಟುಕೊಳ್ಳಲಾಗಿದೆ.

೨) ರಸ್ತೆ ಸಂಚಾರ ಸಂಕೇತಗಳನ್ನು ಅಲ್ಲಲ್ಲಿ ಮುಖ್ಯವಾಗಿ ಅಪಘಾತ ಸಂಭವಿಸಬಹುದಾದ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

೩) ಅಪಘಾತ ವಲಯಗಳನ್ನು ಈ ಹೆದ್ದಾರಿ ರಸ್ತೆಯಲ್ಲಿ ಗುರುತಿಸಲಾಗಿದೆ,ಮತ್ತು ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಸತತವಾಗಿ ತಪಾಸಣೆ ಕೈಗೊಳ್ಳಲಾಗಿದೆ.

೪) ಸಂಚಾರ ತುಂಬಾ ಜಾಸ್ತಿಯಾದ ಸಂದರ್ಭಗಳಲ್ಲಿ ಪೋಲೀಸ್ ಪಹರೆಯನ್ನು ಹಾಕಲಾಗಿದೆ ಮತ್ತು ತೀವ್ರತರ ತಪಾಸಣೆ ಮಾಡಲಾಗುತ್ತಿದೆ,

ಈ) ಹೌದು.

ಜನಸಂಪರ್ಕ ಸಭೆಗಳು

೩೦೫೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಿಂಗಳಿಗೊಮ್ಮೆ ಜರಗಬೇಕಾದ ಜನಸಂಪರ್ಕ ಸಭೆಗಳು ಸರಿಯಾಗಿ ನಡೆಯದೇ ಇರುವುದು ಸರಕಾರಕ್ಕೆ ಗೊತ್ತಾಗಿದೆಯೇ ?

ಆ) ಹಾಗಿದ್ದಲ್ಲಿ ೧೯೮೬–೮೭, ೧೯೮೭–೮೮ನೇ ಸಾಲಿನಲ್ಲಿ ನಡೆದ ಜನಸಂಪರ್ಕ ಸಭೆಯ ಸಂಖ್ಯೆ ಮತ್ತು ನಡೆದ ಸ್ಥಳಗಳಾವುವು, (ತಾಲ್ಲೂಕುವಾರುವಿವರ ನೀಡುವುದು).

ಇ) ಪುಂಗಳೂರು ತಾಲ್ಲೂಕಿನಲ್ಲಿ ತಿಂಗಳಿಂಗಳಿಂದ ಜನಸಂಪರ್ಕ ಸಭೆ ನಡೆಯದೇ ಇದ್ದುದರಿಂದ ಬಡವರಿಗಾಗುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ಬಗ್ಗೆ ಸರ್ಕಾರದ ಕಾರ್ಯಕ್ರಮಗಳೇನು ?